**Code No. 08 X(A)**

# ವಾಣಿಜ್ಯ ಪರೀಕ್ಷೆಗಳು

# ಕನ್ನಡ ಬೆರಳಚ್ಚು – ಪ್ರೌಢ ದರ್ಜೆ – ಪ್ರಥಮ ಪತ್ರಿಕೆ

ಜುಲೈ, 2015

ಸಮಯ : 15 ನಿಮಿಷಗಳು

ಅಂಕಗಳು : 100

***ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು 10 ರಿಂದ 75 ಸ್ಥಾನಗಳಿಗೆ ಅಂಚಿನ ತಡೆಗಳನ್ನು ಸ್ಥಿರಪಡಿಸಿಕೊಂಡು ಎರಡು ಸಾಲುಗಳ ತೆರಪಿನಲ್ಲಿ ಬೆರಳಚ್ಚು ಮಾಡಬೇಕು.
2) ಕಾಗದದ ಒಂದು ಭಾಗದಲ್ಲಿ ಮಾತ್ರ ಬೆರಳಚ್ಚು ಮಾಡಬೇಕು.
3) ತಪ್ಪಿಲ್ಲದೆ ಅಂದವಾಗಿ ಬೆರಳಚ್ಚು ಮಾಡಲು ವಿಶೇಷ ಗಮನ ಕೊಡಬೇಕು.

---

ಮದುವೆ ಒಂದು ಸಾಮಾಜಿಕ ವ್ಯವಸ್ಥೆ; ಹೆಣ್ಣು ಗಂಡಿನ ಸಂಬಂಧದ ಅಧಿಕೃತ ಘೋಷಣೆಯ ಸಮಾರಂಭ. ಇದು ಗಂಡು–ಹೆಣ್ಣಿನ ಸಾಂಸಾರಿಕ ಜೀವನಕ್ಕೆ ಒಂದು ಭದ್ರವಾದ ನೆಲೆಗಟ್ಟನ್ನು ಒದಗಿಸುತ್ತದೆ. ಜೀವನದಲ್ಲಿ ಗಂಡು–ಹೆಣ್ಣು ಪರಸ್ಪರವಾಗಿ ಹೊಂದಾಣಿಕೆಯಿಂದಿರಲು. ಹೊಣೆಗಾರಿಕೆಯಿಂದ ನಡೆಯಲು ಇದರಿಂದ ಸಾಧ್ಯವಾಗುತ್ತದೆ. ಆರೋಗ್ಯಕರ ಸಾಮಾಜಿಕ ಜೀವನಕ್ಕೆ ಇದು ಸಾಧಕ. ಪುರುಷ ಪ್ರಧಾನವಾದ ಸಮಾಜ ಹೆಣ್ಣನ್ನು ಒಂದು ಚರಸ್ವತ್ತೆಂದು ಭಾವಿಸಿದ್ದ ಕಾಲವೊಂದಿತ್ತು. ಹೆಣ್ಣನ್ನು ವಿವಾಹದ ಮೂಲಕ ಪಡೆಯುವಲ್ಲಿ ಘನತೆ–ಗೌರವಗಳು, ರಾಜಕೀಯ ಕಾರಣಗಳು, ಸಮಾಜದ ಸ್ಥಾನಮಾನಗಳು ಹೆಚ್ಚಿನ ಪಾತ್ರವನ್ನು ವಹಿಸುತ್ತಿದ್ದವು. ಒಂದು ಕಾಲಕ್ಕೆ ಹೆಣ್ಣಿಗೆ ತೆರವನ್ನು ಕೊಟ್ಟು ತಂದುಕೊಳ್ಳುತ್ತಿದ್ದರು. ಈಗ ಗಂಡಿಗೆ ವರದಕ್ಷಿಣೆ ಕೊಟ್ಟು ಒಲ್ಲೈಸಿ ಮದುವೆ ಮಾಡಬೇಕಾಗಿದೆ. ಆಧುನಿಕ ಯುಗದ ಮುಕ್ತ ವಾತಾವರಣದಲ್ಲಿ ಹೆಣ್ಣು–ಗಂಡಿನ ಸಂಬಂಧಗಳು ಮೊದಲಿನ ಬಿಗಿಯನ್ನು ಕಳೆದುಕೊಂಡಿವೆ. ನಿರ್ದಿಷ್ಟ ವಯಸ್ಸಿನ ಒಲಿದ ಜೀವಗಳು ಯಾರಿಗೂ ಹೇಳದೆ ಕೇಳದೆ ರಿಜಿಸ್ಟರ್ ಮದುವೆ ಮಾಡಿಕೊಂಡು ಒಂದಾಗಬಹುದು. ಇದು ಹಿಂದೆ ಇದ್ದ ಗಾಂಧರ್ವ ವಿವಾಹ ಪದ್ಧತಿಯನ್ನು ಜ್ಞಾಪಕಕ್ಕೆ ತರುತ್ತದೆ. ಅಂದರೆ ಸಾಮಾಜಿಕ ಅವಶ್ಯಕತೆಗಳಿಗೆ ತಕ್ಕಂತೆ ಮದುವೆಯ ರೀತಿ ನೀತಿಗಳೂ ಬದಲಾಗುತ್ತ ಬಂದಿವೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಇಂದು ಸಮಾಜದಲ್ಲಿ ಹೆಣ್ಣು ಮತ್ತು ಗಂಡಿನ ತಂದೆ–ತಾಯಿಗಳು ಒಪ್ಪಿ ವ್ಯವಸ್ಥಿತವಾಗಿ ನಡೆಯುವ ಮದುವೆಗಳೂ ಕೂಡ ಕಾಲೋಚಿತವಲ್ಲದ ರೀತಿ ನೀತಿಯಿಂದ ಅಪಮೌಲ್ಯಕ್ಕೊಳಗಾಗುವಂತಾಗಿದೆ. ಮದುವೆ ಎನ್ನುವುದು ವಾಸ್ತವವಾಗಿ ಮದುವೆಯಾಗುವ

[ Turn over

ಗಂಡು–ಹೆಣ್ಣಿನ ವೈಯಕ್ತಿಕ ವಿಷಯವಾದರೂ ಆ ಹೆಣ್ಣು–ಗಂಡು ಸಮಾಜದ ಒಂದು ಅಂಗವೇ ಆಗಿರುವುದರಿಂದ ಮದುವೆ ಒಂದು ಸಾಮಾಜಿಕ ಸಮಾರಂಭವೂ ಆಗಿದೆ. ಆ ಸಮಾರಂಭಕ್ಕೆ ನಾನಾ ಕಾರಣಗಳಿಗಾಗಿ ಅಪಾರ ಹಣ ಹಾಗೂ ಕಾಲ ವ್ಯಯವಾಗುತ್ತದೆ. ವಿವಾಹ ವಿಧಿಯ ನೆಪವೊಡ್ಡಿ ವ್ಯವಸ್ಥಿತವಾದ ರೀತಿಯಲ್ಲಿ ಶೋಷಣೆ ನಡೆಯುತ್ತದೆ. ಇಂದಿನ ವಿಚಾರಯುಗದಲ್ಲೂ ಸಹ ಕಂದಾಚಾರಗಳು, ಗೊಡ್ಡು ಸಂಪ್ರದಾಯಗಳು ಮುಂದುವರೆದಿವೆ. ಒಂದು ಮದುವೆ ಮಾಡಿ ಮುಗಿಸುವುದೆಂದರೆ ಒಂದು ಯಜ್ಞ ಮಾಡಿ ಮುಗಿಸಿದಂತೆ ಮದುವೆಯೋ ಮನೆ ಹಾಳೋ ಎಂಬುಂತೆ ಹೆಣ್ಣು ಹೆತ್ತವರು ಗೋಳುಗುಟ್ಟಿ ಹೋಗುತ್ತಿದ್ದಾರೆ. ಇದರಿಂದ ಮುಕ್ತಿ ಯಾವಾಗ ಸಿಗುತ್ತದೆ.

ಮದುವೆಯ ಸಮಯದಲ್ಲಿ ನಡೆಯುವ ಆಚರಣೆಗಳು ಅರ್ಥಪೂರ್ಣವಾಗಿರಬೇಕು, ಆಗುವ ಖರ್ಚ ಹಿತಮಿತವಾಗಿರಬೇಕೆಂದು ಬಯಸುವುದು ತಪ್ಪೇನೂ ಅಲ್ಲ. ಆಯಾ ಕಾಲದ ಅವಶ್ಯಕತೆಗೆ ತಕ್ಕ ಹಾಗೆ ಆಚಾರಗಳು ಇರುತ್ತವೆ. ಪರಿಸ್ಥಿಗೆ ತಕ್ಕಂತೆ ಅವು ಮಾರ್ಪಾಡಬೇಕಾದುದು ಅನಿವಾರ್ಯ. ಹಾಗಾದಾಗ ಮಾತ್ರ ಆಚರಣೆಗಳು ಸಂದರ್ಭಕ್ಕೆ ಉಚಿತವೆನಿಸಿ ಸಾರ್ಥಕವಾಗುತ್ತವೆ. ಯಾವುದೋ ಕಾಲದಲ್ಲಿ ಏರ್ಪಟ್ಟ ವಿವಾಹ ವ್ಯವಸ್ಥೆಯನ್ನು, ಅದರ ರೀತಿ ನೀತಿಯನ್ನು, ಬದಲಾದ ಪರಿಸ್ಥಿತಿಯಲ್ಲೂ ಕುರುಡಾಗಿ ಅನುಕರಣೆ ಮಾಡುವುದು ಅವಿವೇಕವಲ್ಲದೆ ಮತ್ತೇನು ?

ಮದುವೆಯ ಧಾರ್ಮಿಕ ವಿಧಿಗಳಿರುವುದಾದರೂ ಏಕೆ ? ಅಪರಿಚಿತವಾದ ಎರಡು ಜೀವಗಳು ಒಟ್ಟುಗೂಡಿ ಕುಟುಂಬಜೀವನ ನಡೆಸುವುದನ್ನು ಮಾನ್ಯಗೊಳಿಸುವುದಕ್ಕಾಗಿ ಇವೆ. ಗಂಡು–ಹೆಣ್ಣು ತಮ್ಮ ಭಾವೀಬದುಕಿನ ಸುಖದುಃಖಗಳಲ್ಲಿ ಪರಸ್ಪರ ಅರಿತು. ಆದಷ್ಟು ಮಟ್ಟಿಗೆ ವಿರಸಕ್ಕೆ ಎಡೆಗೊಡದಂತೆ ಬಾಳುವ ಪ್ರತಿಜ್ಞೆ ಕೈಗೊಳ್ಳುವ ಸಂದರ್ಭ ಅದು. ಗುರುಹಿರಿಯರಲ್ಲಿ ಗೌರವ ಭಾವಕ್ಕೆ ಕುಟುಂಬದ ಆಶ್ರಿತರ ಬಗ್ಗೆ ಪ್ರೀತಿ, ಎಲ್ಲರೊಡನೆ ಸೌಹಾರ್ದಭಾವನೆ ತೋರುತ್ತಾ ಸಭ್ಯಜೀವನ ಬಗ್ಗೆ ಅವರ ಮನದಲ್ಲಿ ಕರ್ತವ್ಯವನ್ನು ಜಾಗೃತಗೊಳಿಸುವುದೂ ಇದರಲ್ಲಿ ಸೇರಿದೆ. ವಿವಾಹ ಕಾಲಕ್ಕೆ ವಧೂವರರು ಪರಿಶುದ್ಧ ಜೀವನವೇ ತಮ್ಮ ಪರಮಧ್ಯೇಯವೆಂಬ ಪ್ರತಿಜ್ಞೆಯನ್ನು ಕೈಗೊಳ್ಳಬೇಕು, ತನ್ನ ಕುಟುಂಬ, ಆ ಕುಟುಂಬಕ್ಕಿಂತ ತಾನು ವಾಸಿಸುವ ಸಮಾಜ, ದೇಶ, ರಾಷ್ಟ್ರ ದೊಡ್ಡದೆಂಬ ವಿಶಾಲ ಭಾವನೆ ಬೆಳೆಸಿಕೊಳ್ಳುವ ಜವಾಬುದಾರಿಯೂ ಅವರದಾಗಿರುತ್ತದೆ.